ಬ್ಲಾಕ್ ಹೆಡೆಡ್ ಐಬೀಸ್ ಎನ್ನುತ್ತಾರೆ. ಕೊಕ್ಕರೆ ಜಾತಿಗೆ ಸೇರಿದ ಈ ಆಸಾಮಿ ಶಿಕಾರಿಯಲ್ಲಿ ಇಷ್ಟೊಂದು ಐನಾತಿ ಎಂಬ ಸಂಗತಿಯೇ ನನಗೆ ಗೊತ್ತಿರಲಿಲ್ಲ. ಸುಮಾರು ಹಿಂದೆ ಭದ್ರಾ ಹಿನ್ನೀರಿನಲ್ಲಿ ರಿವರ್ ಟರ್ನ್ ಹಕ್ಕಿಗಳ ಮರಿಗಳನ್ನು ಇದು ಹಿಡಿದು ಭಕ್ಷಿಸುತ್ತಿದೆ ಎಂದು ಗೆಳೆಯ ಡಾ. ರಾಘವೇಂದ್ರ ಹೇಳಿದ್ದರು. ಜೀವಂತ ಮರಿಗಳನ್ನು ಹಿಡಿದು 'ಗುಳುಂ' ಮಾಡುವ ಐಬೀಸ್ ಚಿತ್ರವನ್ನು ಭದ್ರಾಹಿನ್ನೀರಿನಲ್ಲಿ ಕಾದು ತೆಗೆದಿದ್ದನ್ನು ಖುದ್ದು ತೋರಿಸಿದ್ದರು. ನಾನು ಅನೇಕ ದಂಡಯಾತ್ರೆಗಳನ್ನು ಮಾಡಿದರೂ ಈ ಅವಕಾಶ ಸಾಧ್ಯವಾಗಿರಲಿಲ್ಲ.

ನಾವು ಅಷ್ಟೊಂದು ಆಸ್ಥೆ ವಹಿಸಿ ಸಾವಿರಾರು ಮೈಲಿ ದೂರದ ಒರಿಸ್ಸಾದ ಚಿಲಿಕಾ ಸರೋವರದ ಜೌಗು ನೆಲಕ್ಕೆ ಬಂದಿರುವುದೇ ಈ ಕರಿ ಕೆಂಬರಲು ಹಕ್ಕಿ ಜೀವಂತ ಹಾವುಗಳನ್ನು ಯಾವ ರೀತಿ ಹಿಡಿಯುತ್ತದೆ ಎಂದು ನೋಡಲು. ಅಷ್ಟೇ ಅಲ್ಲದೆ ದೊಡ್ಡ ದೊಡ್ಡ ಹಾವುಗಳನ್ನೇ ಹೇಗೆ ಇಡಿಯಾಗಿ ಗುಳಂ ಮಾಡುತ್ತದೆ ಎಂದು ಚಿತ್ರೀಕರಿಸಲು. ಯಾವ ಮುಲಾಜೂ ಇಲ್ಲದೆ ಸರಕ್ಕೆಂದು ಹಾವನ್ನು ಹಿಡಿದು ಸ್ವಾಹ ಮಾಡುವ ಇದರ ನಡವಳಿಕೆಯ ಮೇಲೆ ನಮ್ಮ ಕುತೂಹಲವೂ ಹೆಚ್ಚಿತ್ತು. ಈ ಹಕ್ಕಿಯ ಬೇಟೆಯ ಚಾಣಾಕ್ಷತೆಯನ್ನು ವೀಕ್ಷಿಸುವುದು ನಮಗೆ ಯಾವ ಕ್ರೀಡೆಗೂ ಕಮ್ಮಿಯಿಲ್ಲದಂತೆ ಅತೀವ ಆಸಕ್ತಿ ಹುಟ್ಟಿಸಿತ್ತು.

ನನಗೆ ಹಕ್ಕಿ ಫಟ್ಟಂತ ಹಾರಿ ಬಿಟ್ಟರೆ ಅದರ ರೆಕ್ಕೆಗಳು ಸ್ಪಷ್ಟವಾಗಿ ದಾಖಲಾಗುವಂತಹ ಶಟರ್ ಸ್ಪೀಡ್ ಸಂಯೋಜಿಸಿ ಸ್ಥಿರಚಿತ್ರ ತೆಗೆಯಬೇಕು ಎಂಬಾಸೆ. ಹಕ್ಕಿ ಯಾವಾಗ ಹಾರುತ್ತದೆ ಎಂದು ಊಹಿಸುವುದು ಬಹಳ ಕಷ್ಟ. ಹಾವನ್ನು ಕೊಕ್ಕಿನಲ್ಲಿ ಸಿಕ್ಕಿಸಿಕೊಂಡು ಆಗಸಕ್ಕೆ ನೆಗೆಯುವ ಹಕ್ಕಿ ಚಿತ್ರ ತೆಗೆಯುವ ತಲಬು ನನ್ನದು. ಆದರೆ, ಇದಕ್ಕಾಗಿ ಟ್ರೈ ಪ್ಯಾಡಿಗೆ ಸೆರೆಯಾದ ಕ್ಯಾಮೆರಾ ಕುತ್ತಿಗೆಯನ್ನು ಹಕ್ಕಿ ಹಾರಿದ ಕಡೆಗೆ ಮಿಂಚಿನಂತೆ ತಿರುಗಿಸಬೇಕು. ಇದೆಲ್ಲಾ ಅಂದುಕೊಂಡಂತೆ ಆಗುವ ಬಾಬತ್ತಲ್ಲ. ಉಯ್ಯಾಲೆಯಂತೆ ತೂಗುವ ದೋಣಿಯಲ್ಲಿ ಅಸಡಾಬಸಡ ಕೂತು ಇಷ್ಟೆಲ್ಲಾ ದುಸ್ಸಾಹಸ ಮಾಡುವುದು ತೀರಾ ಆಗದ ಕೆಲಸ. ಇದರಲ್ಲಿ ಯಾವ ಕೆಲಸ ಕೊಂಚ ತಡವಾದರೂ, ಸಣ್ಣ ಏರುಪೇರಾದರೂ ನಮ್ಮ ನಿರೀಕ್ಷೆಯ ಚಿತ್ರ ಸಿಕ್ಕುವುದೇ ಇಲ್ಲ. ಅನೇಕ ಸಲ ಎಲ್ಲಾ ಸಿದ್ಧತೆ ಮಾಡಿಟ್ಟುಕೊಂಡು ಹೋಗಿ ಏನಾದರೂ ಗಡಿಬಿಡಿ, ಎಡವಟ್ಟು ಮಾಡಿಕೊಂಡು ನಾನು ಇಲ್ಲಿಯ ತನಕ ಕಳಕೊಂಡ ಅತ್ಯುತ್ತಮ ಚಿತ್ರಗಳಿಗೆ ಲೆಕ್ಕವೇ ಇಲ್ಲ. ಕೆಲವೊಮ್ಮೆ ಎಲ್ಲಾ ನೆಟ್ಟಗಿದ್ದರೂ ಫೋಟೊಗ್ರಫಿ ಫೀಲ್ಡಿನಲ್ಲಿ ನಸೀಬೇ ನೆಟ್ಟಗಿರುವುದಿಲ್ಲ.

ವಿಚಿತ್ರವೆಂದರೆ ಅನೇಕ ಸಲ ನಮಗಿಂತ ಕಡಿಮೆ ಬೆಲೆಯ ಹಗುರ ಲೆನ್ಸ್ ತಂದವರು ಚಕಚಕಾಂತ ಎತ್ತ ಬೇಕಾದರೂ ಸಲೀಸಾಗಿ ತಿರುಗಿ ಚಿತ್ರ ತೆಗೆದು ಬಿಸಾಕುವುದುಂಟು. ಮಧ್ಯಪ್ರದೇಶದಿಂದ ಬಂದಿದ್ದ ಸರ್ ತಾಜ್ ಸಿಂಗ್ ಎಂಬಾತ ಮಧ್ಯಮ ಕ್ರಮಾಂಕದ ಐನೂರು ಎಂ.ಎಂ. ಲೆನ್ಸಿನಲ್ಲೇ ಎಲ್ಲವನ್ನೂ ಸುಲಭವಾಗಿ ಚಚ್ಚುತ್ತಿದ್ದ. ಬಸುರಿ ಹೆಂಗಸಿನಂತೆ ಫಿರಂಗಿ ತರಹದ ಕ್ಯಾಮೆರಾ ಮತ್ತದರ ಮೂತಿ ಹೊತ್ತ ನಾನು ಉಸ್ಸೆಂದು ಚಿತ್ರ ಕೈಚೆಲ್ಲಿ ಕೂತಿದ್ದೆ.

ಇನ್ನು ನಮ್ಮ ಶಿಕಾರಿ ವೀರ ಕರಿ ಕೆಂಬರಲು ಬಳಿ ಬರೋಣ. ಈ ಹಕ್ಕಿ ಜೌಗು ಕೆಸರಿನ ನೀರಿನೊಳಗಿನಿಂದ ಈಗ ಕಪ್ಪೆ, ಇಲ್ಲವೇ ಹಾವಿಗಾಗಿ ತಡಬಡಾಯಿಸಿ ಹುಡುಕುತ್ತಿದೆ. ನೀರಿನಲ್ಲಿ ಹರಿದಾಡುವ ಹಾವು ಸಿಕ್ಕ ತಕ್ಷಣ ಉದ್ವೇಗ ಪ್ರಕಟಿಸುವ ಹಕ್ಕಿ ಕೊಂಚ ತಕಪಕ ಕುಣಿಯುತ್ತದೆ. ಇದರ ಈ ಸಂಭ್ರಮ ವರ್ತನೆಯನ್ನು ದೂರವಿದ್ದವರೂ ನೋಡಿ ತಕ್ಕಮಟ್ಟಿಗೆ ಅಂದಾಜಿಸಬಹುದು. ನೀರ ಮೇಲೆ ಅಲ್ಲಲ್ಲಿ ಚದುರಿ ನಿಂತ ಪಟಗಾರರು ದುರ್ಬೀನು ಹಿಡಿದು ಈ ಕ್ಷಣಕ್ಕಾಗಿಯೇ ಕಾಯುತ್ತಾರೆ. ಆಗ ಈ ಹಕ್ಕಿಗೆ ಅತ್ಯಂತ ಸಮೀಪದಲ್ಲಿ ಕ್ಯಾಮೆರಾ ಕೀಲಿಸಿ ಗಂಟೆಗಟ್ಟಲೆ ಕೂತವನದು ಬಿಡಿ ಶುಕ್ರದೆಸೆ. ಅದೇ ದೂರದಲ್ಲಿದ್ದವರು ಈ ವಿಷಯ ತಿಳಿದು ಬೋಟಿನಲ್ಲಿ ತೆವಳಿಕೊಂಡು ಹತ್ತಿರ ಹತ್ತಿರಕ್ಕೆ ಬರಬೇಕಿತ್ತು. ಅಷ್ಟರಲ್ಲಿ ಹಾವನ್ನು ಬಕವು ಶ್ಯಾವಿಗೆ ಪಾಯಸದಂತೆ ಎಳೆದು ಹೊಟ್ಟೆಗೆ ಪೋಣಿಸಿಕೊಂಡಿರುತ್ತಿತ್ತು. ಇಲ್ಲಿ ಬೇಟೆಚಿತ್ರ ಸಿಕ್ಕವರಿಗಷ್ಟೇ ಸೀರುಂಡೆ. ನನಗಂತೂ ಮೊದಲ ದಿನ ಹೀಗೆ ಆಗಿ ಬೋಣಿಯೇ ಆಗಲಿಲ್ಲ. ಹಕ್ಕಿಯ ಶಪಿಸಿಕೊಂಡು ಬಂದಿದ್ದೆ.

ಅಚ್ಚರಿ ಎಂದರೆ ಹಾವನ್ನು ಹಿಡಿದ ತಕ್ಷಣ ಕರಿ ಕೆಂಬರಲು ತನ್ನ ಕೊಕ್ಕನ್ನು ಬಲವಾಗಿ ಬಳಸಿ ಕುಕ್ಕತೊಡಗುತ್ತದೆ. ಚೂಪಾದ ಕೊಕ್ಕು ಎರ್ರಾಬಿರ್ರಿ ಚುಚ್ಚಿದ ಮೇಲೆ ಹಾವನ್ನು ಹಿಡಿದಿಡಿದು ಅಲ್ಲಾಡಿಸಿ ಹಾವಿಗೆ ದಿಕ್ಕೇ ತೋಚದಂತೆ ಮಾಡುತ್ತದೆ. ಹಾವಿನ